ದಿನಾಂಕ 10.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-**

ನಾನು ಚೇಂದ್ರಿಮಾಡ ಕುಟುಂಬಕ್ಕೆ ಸೇರಿದವನು. ವಾದಿಯು ಅಮ್ಮೇಕಂಡ ಕುಟುಂಬಕ್ಕೆ ಸೇರಿದವರು. ಎರಡು ಕುಟುಂಬದವರು ಸುಮಾರು ವರ್ಷಗಳಿಂದ ಅಕ್ಕಪಕ್ಕ ಜಮೀನುಗಳನ್ನು ಹೊಂದಿರುತ್ತೇವೆ. ನಾವು ಅಮ್ಮೇಕಂಡ ಮತ್ತು ಕೊಲ್ಲೀರ ಕುಟುಂಬದವರಿಂದ ಆಸ್ತಿಗಳನ್ನು ಖರೀದಿಸಿರುತ್ತೇವೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ದಾಖಲಿಸಿರುವುದಿಲ್ಲ. ವಾದಿಯು ದಾವೆಯನ್ನು ಸಲ್ಲಿಸುವುದಕ್ಕಿಂತ ಮೊದಲು ತನ್ನ ವಕೀಲರ ಮೂಲಕ ನನಗೆ ನೋಟೀಸು ಕಳುಹಿಸಿದ್ದು, ಅದಕ್ಕೆ ನಾನು ನಿ.ಪಿ 7 ರಂತೆ ಉತ್ತರವನ್ನು ನೀಡಿರುತ್ತೇನೆ. ನಿ.ಪಿ 7 ರಲ್ಲಿ 50 ಸೆಂಟ್ಸ್ ಜಾಗವನ್ನು ವಾದಿಗೆ ಬಿಟ್ಟುಕೊಟ್ಟ ವಿಚಾರವನ್ನು ನಮೂದಿಸಿರುವ ಬಗ್ಗೆ ನನಗೆ ಈಗ ನೆನಪಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ 2 ಎಕರೆ 50 ಸೆಂಟ್ಸ್ ಎಂದರೆ ಸರಿ. ದಾವಾಸ್ವತ್ತನ್ನು ವಾದಿಯು ಅಳತೆ ಮಾಡಿಸಿರುವುದಿಲ್ಲ. ನಿ.ಪಿ 1 ರಲ್ಲಿ ಸರ್ವೆ ನಂಬರ್ 137/2 ನ್ನು ಎರಡು ಭಾಗಗಳಾಗಿ ತೋರಿಸಲಾಗಿದೆ ಎಂದರೆ ಸರಿ. ನಿ.ಪಿ 1 ರಲ್ಲಿ ಹಳದಿ ಬಣ್ಣದಿಂದ ತೋರಿಸಿರುವ ಜಾಗವು ನಾನು ಒತ್ತುವರಿ ಮಾಡಿರುವ ಜಾಗ ಎಂದರೆ ಸರಿಯಲ್ಲ. ನಿ.ಪಿ 3 ರಲ್ಲಿ ಒತ್ತುವರಿ ಮಾಡಿರುವ ಜಾಗದ ಸರ್ವೆ ನಂಬರ್ 137/8 ಎಂದು ನಮೂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಪತ್ರದಲ್ಲಿ ಏನು ಬರೆದಿದೆ ಎಂಬುದು ನನಗೆ ಈಗ ನೆನಪಿಲ್ಲ. ದಾವಾಸ್ವತ್ತಿನ ಉತ್ತರಕ್ಕೆ ನನಗೆ ಸೇರಿದ ಸರ್ವೆ ನಂಬರ್ 137/3 ರ ಜಮೀನು ಇದೆ. ನಾನು ದಾವಾಸ್ವತ್ತಿನ ಪೈಕಿ 1 ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡು ಅದಕ್ಕೆ ಸರ್ವೆ ನಂಬರ್ 137/8 ಎಂದು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 137/8 ಯಾರ ಸ್ವಾಧೀನದಲ್ಲಿದೆ ಎಂಬುದು ನನಗೆ ಗೊತ್ತಿಲ್ಲ. ನಾನು ಸರ್ವೆ ನಂಬರ್ 137/8 ರ ಜಮೀನಿನಲ್ಲಿ ಅಕ್ರಮವಾಗಿ ಸ್ವಾಧೀನಾನುಭವದಲ್ಲಿದ್ದು ಅದನ್ನು ವಾದಿಗೆ ಬಿಟ್ಟುಕೊಡಲು ಬಾಧ್ಯನಾಗಿರುತ್ತೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 137/8 ರ ಜಮೀನಿಗೆ ಆಕಾರಬಂದ್ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ದಾವಾಸ್ವತ್ತಿನ ಒಟ್ಟು ವಿಸ್ತೀರ್ಣ 2 ಎಕರೆ 50 ಸೆಂಟ್ಸ್ ನ ಪೈಕಿ 1 ಎಕರೆ ಜಮೀನಿನಲ್ಲಿ ಅಂದರೆ ಸರ್ವೆ ನಂಬರ್ 137/8 ರಲ್ಲಿ ಅಕ್ರಮವಾಗಿ ಸ್ವಾಧೀನದಲ್ಲಿ ಇದ್ದು, ಅದನ್ನು ವಾದಿಗೆ ಬಿಟ್ಟುಕೊಡಲು ಬಾಧ್ಯನಾಗಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.